**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಬಂಗಾರಪೇಟೆ**

**ಸಿಸಿ ಸಂಖ್ಯೆ:** 388/2019 **CW**-2 **PW**-1

**ಸಾಕ್ಷಿಯನ್ನು ದಿಃ 16.02.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಹೆಸರುಃ** | ರಾಧಾ ಕೃಷ್ಣ |
| **ತಂದೆ ಹೆಸರುಃ** | ಮುನಿಯಪ್ಪ |
| **ವಯಸ್ಸುಃ** | 48 ವರ್ಷ |
| **ವೃತ್ತಿಃ** | ಮುಖ್ಯಪೇದೆ |
| **ವಾಸ ಸ್ಥಳಃ** | ಕೆಜಿಎಫ್ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ ಇಲ್ಲಿಯವರೆಗೂ ಜಿಲ್ಲಾ ಮೀಸಲುಪಡೆಯ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಸಿರುತ್ತೇನೆ.

2018 ರ ಸಾಲಿನ ಕರ್ನಾಟಕ ವಿಧಾನಸಭಾ ಚುನಾವಣೆಯ ಪ್ರಯುಕ್ತ ನನ್ನನ್ನು ಎಂ.ಸಿ.ಸಿ ಸ್ಕ್ವಾಡ್ ಗೆ ನಿಯೋಜನೆ ಮಾಡಿದ್ದರು. ಸದರಿ ಸ್ಕ್ವಾಡ್ ನಲ್ಲಿ ನನ್ನ ಜೊತೆ ಚಾಸಾ-1,3 ಮತ್ತು 4 ರವರು ಕರ್ತವ್ಯ ನಿರ್ವಹಿಸುತ್ತಿದ್ದರು. ದಿನಾಂಕ 13.04.2018 ರಂದು ಸಂಜೆ 5.45 ರ ಸಮಯದಲ್ಲಿ ನಮಗೆ ಬಂಗಾರಪೇಟೆ ತಾಲ್ಲೂಕು ಕಛೇರಿಯ ಕಂಟ್ರೋಲ್ ರೂಂನಿಂದ ದೂರವಾಣಿ ಮುಖಾಂತರ ಮಾಹಿತಿ ಬಂದಿದ್ದು, ಅದರಂತೆ ಬೀರಂಡಹಳ್ಳಿ ಗ್ರಾಮದ ಸಮೀಪ ಒಂದು ಟೆಂಪೋ ನೆಲಕ್ಕೆ ಉರುಳಿದ್ದು ಅದರಲ್ಲಿ ಅಕ್ಕಿ ಮೂಟೆಗಳು ಇದ್ದು ಪರಿಶೀಲಿಸುವಂತೆ ತಿಳಿಸಿದರು. ಅದರಂತೆ ನಾವು ಸದರಿ ಸ್ಥಳಕ್ಕೆ ಹೋಗಿ ಟೆಂಪೋವನ್ನು ಪರಿಶೀಲಿಸಲಾಗಿ ಅದರ ಸಂಖ್ಯೆ ಕೆಎ-40-834 ಆಗಿದ್ದು ಅದರಲ್ಲಿ 50 ಕೆಜಿ ತೂಕದ 75 ಅಕ್ಕಿ ಮೂಟೆಗಳು ಇದ್ದವು. ಸದರಿ ವಾಹನದ ಚಾಲಕ ಇರಲಿಲ್ಲ. ವಾಹನವನ್ನು ಪರಿಶೀಲಿಸಿದಾಗ ಅಕ್ಕಿ ಮೂಟೆಗಳಿಗೆ ಸಂಬಂಧಪಟ್ಟಂತೆ ಯಾವುದೇ ಪರವಾನಿಗೆ ಇರಲಿಲ್ಲ. ಸದರಿ ಅಕ್ಕಿ ಮೂಟೆಗಳನ್ನು ಬೇರೊಂದು ವಾಹನದಲ್ಲಿ ಬಂಗಾರಪೇಟೆ ಪೋಲೀಸ್

ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ, ಉರುಳಿದ್ದ ಟೆಂಪೋವನ್ನು ಸಹ ಪೋಲೀಸ್ ಠಾಣೆಗೆ ತಂದಿರುತ್ತೇನೆ. ಈ ಸಂಬಂಧ ಸದರಿ ಸ್ಥಳದಲ್ಲಿ ವಿಡಿಯೋ ಮಾಡಲಾಗಿರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎಂ.ಆರ್ ವಕೀಲರಿಂದಃ

ಸದರಿ ವಾಹನಕ್ಕೆ ಸಂಬಂಧಪಟ್ಟ ಮತ್ತು ವಾಹನದ ಚಾಲಕನಿಗೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳು ಆ ದಿನ ವಾಹನದಲ್ಲಿ ಸಿಕ್ಕಿರುವುದಿಲ್ಲ. ಅಕ್ಕಿ ಮೂಟೆಗಳು ಗೋಣಿ ಚೀಲದಲ್ಲಿ ತುಂಬಿದ್ದಾಗಿರುತ್ತದೆ. ನಾನು ಅಕ್ಕಿ ಮೂಟೆಗಳನ್ನು ನೋಡಿರುತ್ತೇನೆ. ಅದರ ಮೇಲೆ ಸರ್ಕಾರದ ಮೊಹರು ಅಥವಾ ಚಿಹ್ನೆಗಳು ಇರುವುದು ಕಂಡುಬಂದಿರುವುದಿಲ್ಲ. ನಾವು ಆ ದಿನ ಯಾವುದೇ ಪೋಟೋ ತೆಗೆದಿರುವುದಿಲ್ಲ. ನಾವು ಅಕ್ಕಿ ಮೂಟೆಗಳನ್ನು ಪೋಲೀಸ್ ಠಾಣೆಗೆ ಸ್ಥಳಾಂತರ ಮಾಡುವವರೆಗೂ ಇದ್ದೆವು .ಸದರಿ ಸ್ಥಳದಲ್ಲಿ ನನ್ನ ಮುಂದೆ ಬರವಣಿಗೆ ಮಾಡಿರುವುದಿಲ್ಲ ಮತ್ತು ಸಹಿ ಪಡೆದಿರುವುದಿಲ್ಲ ಎಂದರೆ ಸರಿ. ನಾನು ಚಾಸಾ-1,3 ಮತ್ತು 4 ರವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ವಾಹನ ಸಂಖ್ಯೆ ಕೆಎ-01-1103 ವಾಹನದಲ್ಲಿ ಅಕ್ಕಿಮೂಟೆಗಳನ್ನು ಪೋಲೀಸ್ ಠಾಣೆಗೆ ಸಾಗಾಣಿಕೆ ಮಾಡಿರುತ್ತೇವೆ. ಸದರಿ ವಾಹನದ ಚಾಲಕನ ಹೆಸರು ಗೊತ್ತಿಲ್ಲ. ನಮಗೆ ಯಾವುದೇ ಮಾಹಿತಿ ಬಂದಿಲ್ಲ ಮತ್ತು ನಾವು ಆ ದಿನ ಸದರಿ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ವಾಹನ ಮತ್ತು ಅಕ್ಕಿಯನ್ನು ಜಪ್ತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಚುನಾವಣಾ ಪ್ರಯುಕ್ತ ಅಂಕಿಅಂಶಗಳಿಗಾಗಿ ಈ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ ಹೇ ಕೇ ಸರಿ ಇದೆ.

**Sd**/-

**(ಕೇಶವಮೂರ್ತಿ.ಬಿ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಬಂಗಾರಪೇಟೆ